ಹಾಗೂ ಚುನಾಯಿತ ಜನ ಪ್ರತಿನಿಧಿಗಳಲ್ಲಿ ಅನಧಿಕೃತ ಮದ್ಯದ ಸೇವನೆಯ ದುಷ್ಪರಿಣಾಮಗಳ ಬಗ್ಗೆ ತಿಳುವಳಿಕೆ ಮೂಡಿಸುವುದು ಮತ್ತು ಅವರ ಸಹಕಾರ ಪಡೆದು ಅಬಕಾರಿ ಕಾಯ್ದೆಯನ್ನು ಜಾರಿಗೆ ತಂದು ಅಕ್ರಮ ತಯಾರಿಕೆ/ ಸಾಗಾಣಿಕೆ/ ಬಳಕೆಯನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಹೌದು.

ಈ) ಹೌದು. ಅಂತಹ ಪ್ರಕರಣಗಳನ್ನು ಪತ್ತೆಹಚ್ಚಿ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ.

ಉ) ಅನಧಿಕೃತ ಮದ್ಯ ಮಾರಾಟಗಾರರ ಮೇಲೆ ಕಾನೂನು ರೀತ್ಯ ಕ್ರಮ ಕೈಗೊಂಡು ಮೊಕದ್ದಮೆಗಳನ್ನು ದಾಖಲಿಸುವುದರ ಮೂಲಕ ಅಕ್ರಮಗಳನ್ನು ತಡೆಗಟ್ಟಲು ಕ್ರಮ ಕೈಗೊಳ್ಳಲಾಗುತ್ತಿದೆ.

ರಾಯಚೂರು ಜಿಲ್ಲೆಗೆ ಡಾ.ಡಿ.ಎಂ ನಂಜುಂಡಪ್ಪ ವರದಿಯನ್ವಯ ಅನುದಾನ ಬಿಡುಗಡೆ

502 (447) ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು) : **ಮಾನ್ಯ** ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಯಚೂರು ಜಿಲ್ಲೆಗೆ ಡಾ: ಡಿ.ಎಂ.ನಂಜುಂಡಪ್ಪ ವರದಿಯನ್ವಯ ಕಳೆದ ಎರಡೂವರೆ ವರ್ಷಗಳಲ್ಲಿ ಮಂಜೂರಾದ ಹಾಗೂ ಬಿಡುಗಡೆಯಾದ ಅನುದಾನದ ಮೊತ್ತವೆಷ್ಟು (ವರ್ಷವಾರು ವಿವರ ನೀಡುವುದು);

ಆ) ಈ ಅನುದಾನದಲ್ಲಿ ಸಿಂಧನೂರು ತಾಲ್ಲೂಕಿಗೆ ಮಂಜೂರಾದ ಹಾಗೂ ಬಿಡುಗಡೆಯಾದ ಅನುದಾನದ ಮೊತ್ತವೆಷ್ಟು (ವರ್ಷವಾರು ವಿವರ ನೀಡುವುದು);

ಇ) ಈ ಅನುದಾನದಲ್ಲಿ ಸಿಂಧನೂರು ತಾಲ್ಲೂಕಿನಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. (ಇಲಾಖಾವಾರು ವಿವರ ನೀಡುವುದು);

ಈ) ಈ ಕಾಮಗಾರಿಗಳನ್ನು ಕಾರ್ಯರೂಪಕ್ಕೆ ತರಲು ಸರ್ಕಾರ ಅನುಸರಿಸುವ ಮಾನದಂಡಗಳೇನು;

ಉ) ಈ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಮೊದಲು ಶಾಸಕರ ಗಮನಕ್ಕೆ ತರಬೇಕೆಂಬ ನಿಯಮವೇನಾದರೂ ಇದೆಯೇ (ಅದರ ಪ್ರತಿಯನ್ನು ನೀಡುವುದು);

ಊ) ಹಾಗಿದ್ದಲ್ಲಿ ಈವರೆವಿಗೂ ಶಾಸಕರ ಗಮನಕ್ಕೆ ತರದೆ ಯಾವ ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ (ವಿವರ ನೀಡುವುದು);

ಋ) ಈ ರೀತಿ ಲೋಪವೆಸಗಿರುವ ಅಧಿಕಾರಿಗಳ ವಿರುದ್ಧ ಸರ್ಕಾರ ಕ್ರಮ ಕೈಗೊಂಡಿದೆಯೇ; ಹಾಗಿದ್ದಲ್ಲಿ, ಯಾವ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗಿದೆ (ವಿವರ ನೀಡುವುದು)?

ಶ್ರೀ ವಿ.ಎಸ್. ಆಚಾರ್ಯ (ಉನ್ನತ ಶಿಕ್ಷಣ ಸಚಿವರು) :

ಅ) ಡಾ: ಡಿ.ಎಂ.ನಂಜುಂಡಪ್ಪ ವರದಿಯನ್ವಯ ಉನ್ನತ ಶಿಕ್ಷಣ ಇಲಾಖೆಗೆ ಪ್ರತ್ಯೇಕವಾಗಿ ಯಾವುದೇ ಅನುದಾನ ಹಂಚಿಕೆಯಾಗಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಅನ್ವಯಿಸುವುದಿಲ್ಲ.

ಈ) ಅನ್ವಯಿಸುವುದಿಲ್ಲ.

ಉ) ಅನ್ವಯಿಸುವುದಿಲ್ಲ.

ಊ) ಅನ್ವಯಿಸುವುದಿಲ್ಲ.

ಋ) ಅನ್ವಯಿಸುವುದಿಲ್ಲ.

ನಗರ ಪ್ರದೇಶದ 'ಎ' ದರ್ಜೆ ಶಾಲೆಗಳಲ್ಲಿ ಶಿಕ್ಷಕರ ಕೊರತೆ

503 (448) ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ನಗರ ಪ್ರದೇಶಗಳ 'ಎ' ದರ್ಜೆ ಶಾಲೆಗಳಲ್ಲಿ ಶಿಕ್ಷಕರುಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಎಷ್ಟು ಹುದ್ದೆಗಳ ಕೊರತೆ ಇದೆ (ಜಿಲ್ಲಾ ಮತ್ತು ತಾಲ್ಲೂಕುವಾರು ವಿವರ ನೀಡುವುದು);

ಆ) ಹಾಗಿದ್ದಲ್ಲಿ, ಈ ಕೊರತೆಯನ್ನು ನೀಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;